ಪ್ರಬಂಧ

# ಹೆಜ್ಜೇನು ಸಂಗವಿದು ಸಜ್ಜನರ ಗಮನಕ್ಕೆ



**ನಾಗೇಶ ಹೆಗಡೆ**

ಕಲೆ: ರಾಮಕೃಷ್ಣ ಸಿದ್ರಪಾಲ್

ಮೊನ್ನೆ ಮಧ್ಯಾಹ್ನ ಸ್ನಾನಕ್ಕೆ ಅಂತ ಬಾತ್‌ರೂಮ್ ಹೊಕ್ಕಿದ್ದೇ ತಡ, ದಂಗಾಗಿ ನಿಂತೆ. ಕಿಟಕಿಯ ಪಕ್ಕದ ಸಜ್ಜಾ ಮೇಲೆ ಹೆಜ್ಜೇನಿನ ದೊಡ್ಡ ಪಡೆಯೊಂದು ಠಿಕಾಣಿ ಹೂಡಲು ಸಿದ್ಧತೆ ನಡೆಸಿತ್ತು. ಅದೆಷ್ಟೊ ಸಾವಿರ ಜೇನ್ನೊಣಗಳು ಅದಾಗಲೇ ತೇರುಕಟ್ಟಿ ಕೂತಿದ್ದವು. ಇನ್ನೂ ಸಾವಿರಾರು ನೊಣಗಳು ಗವ್ವೆಂದು ಗದ್ದಲ ಹಾಕುತ್ತ ದಂಡುಗಟ್ಟಿ ಬಂದು ಗುಂಪಿಗೆ ಸೇರಲು ಹವಣಿಸುತ್ತಿದ್ದವು. ಗೊಂಚಲು ಗೊಂಚಲಾಗಿ ಕೆಲವು ಕೆಳಕ್ಕೆ ಉದುರುತ್ತ ಮತ್ತೆ ಮೇಲೇರಿ ಗಪ್ಪಾಗಿ ಕೂರುತ್ತ ದಾಂಧಲೆ ನಡೆಸಿದ್ದವು. ತೆರೆದೇ ಇದ್ದ ಕಿಟಕಿಯನ್ನು ಹುಷಾರಾಗಿ ಮುಚ್ಚೋಣವೆಂದರೆ ಅದೂ ಸಾಧ್ಯ ಇರಲಿಲ್ಲ. ಏಕೆಂದರೆ ಮುಚ್ಚಲೆಂದು ಹೋದರೆ ಒಂದರ್ಧ ಪಾಲು ನೊಣಗಳನ್ನು ನನ್ನತ್ತ ಬಾಚಿಕೊಂಡೇ ಬರಬೇಕು.

ಫಜೀತಿ ಆಯ್ತಲ್ಲ ಇದು!

ನಾವು ಬಾಡಿಗೆಗಿರುವ ಈ ಅಪಾರ್ಟ್‌ಮೆಂಟ್‌ನಲ್ಲಿ ಇನ್ನೂ 9 ಇಂಥವೇ ಬಾತ್‌ರೂಮ್ ಸಜ್ಜಾ ಇವೆ. ಪಕ್ಕದ ಇನ್ನೊಂದು ಅಪಾರ್ಟ್‌ಮೆಂಟ್‌ನಲ್ಲೂ ಹತ್ತಾರೆಂಟು ಸಜ್ಜಾಗಳಿವೆ. ಅವೆಲ್ಲ ಬಿಟ್ಟು ನಮ್ಮ ಸಜ್ಜಾಕ್ಕೇ ಜೋತು ಬೀಳಬೇಕಿತ್ತೆ? ಹಿಂದೊಮ್ಮೆ ಕೂಡಾ ಹೀಗೇ ಆಗಿತ್ತು, ನಾವು ಬಿಟಿಎಮ್ ಲೇಔಟ್‌ನಲ್ಲಿ ಇದ್ದಾಗ. ಹೆಜ್ಜೇನೊಂದು ಅಲ್ಲಿನ 180 ಅಪಾರ್ಟ್‌ಮೆಂಟ್ ಮನೆಗಳನ್ನು ಬಿಟ್ಟು ನಮ್ಮ ಮನೆಯ ಸಜ್ಜಾವನ್ನೇ ಸಬ್‌ಲೆಟಿಂಗ್ ಮಾಡಿಕೊಂಡಿತ್ತು. ಆ ಕತೆಯನ್ನು ಆಮೇಲೆ ಹೇಳ್ತೀನಿ. ಸರಿ, ಶುರುವಾಯ್ತು ನಮ್ಮ ಈ ಹೊಸ ಟೆನಂಟಸ್ತಿಕೆ.

ಬಾತ್‌ರೂಮ್ ಬಾಗಿಲು ಮುಚ್ಚಿ, ಸೊಳ್ಳೆಪರದೆಯ ಕಟ್‌ಪೀಸ್, ಗೋಂದು ಮೊಳೆ, ಅಂಟಿನ ಟೇಪು ಎಲ್ಲ ಜೋಡಿಸಿ ಇಟ್ಟುಕೊಂಡೆ. ಕತ್ತಲಾದ ಮೇಲೆ ಮೆಲ್ಲಗೆ ಬಾತ್‌ರೂಮ್ ಹೊಕ್ಕು 2x2 ಅಡಿ ಸೊಳ್ಳೆಪರದೆಯನ್ನು ಕರ್ಟನ್ ಮಾದರಿಯಲ್ಲಿ ಕಿಟಕಿಗೆ ಅಂಟಿಸಿದೆ.

ಮೊಳೆ ಹೊಡೆಯುವಂತಿಲ್ಲ. ಅತ್ತ ಜೇನುಹುಟ್ಟು, ಇತ್ತ ಮನೆಮಾಲಿಕ- ಇಬ್ಬರೂ ಅಟ್ಟಿಸಿಕೊಂಡು ಬಂದಾರು! ಪರದೆ ಫಿಟ್ಟಾಗಿ ಕೂತಿತು. ಎಕ್ಸ್‌ಹಾಸ್ಟ್ ಫ್ಯಾನನ್ನೂ ಡಿಸ್‌ಕನೆಕ್ಟ್ ಮಾಡಿದೆ. ಇಲ್ಲಾಂದರೆ ಅಕಸ್ಮಾತ್ ಆನ್ ಮಾಡಿದರೆ ಆಚಿನ ಇಡೀ ಗೂಡಿಗೇ ಚಂಡಮಾರುತ! ಇನ್ನು ಮೇಲೆ ರಾತ್ರಿ ವೇಳೆ ಬಾಥ್‌ರೂಮ್ ಲೈಟ್ ಹಾಕುವಂತಿಲ್ಲ. ಪತ್ನೀಮಣಿಯ